# ‘ಪ್ರಾಣ ಕಾಪಾಡಿದ್ದು ಮೆಡಲ್ ಮೀರಿದ್ದು’

◆ ‘ನಂದಗೋಕುಲ’ ನೋಡಿದರೆ ನಿಮಗೆ ಏನೆನಿಸುತ್ತದೆ?

ಈ ಕಥೆ ವೀಕ್ಷಕರಿಗೆ ತಮ್ಮ ಕುಟುಂಬವನ್ನು ಒಳಗೊಂಡಿದೆಯೇನೋ ಅನ್ನುವಂತೆ ಇದೆ. ಪ್ರತಿ ಮನೆಯಲ್ಲಿ ನಡೆಯುವ ಘಟನೆಗಳು ಬರುತ್ತಲೇ ಇರುತ್ತವೆ. ಕುಟುಂಬದೊಳಗಿನ ನವಿರಾದ ಸಂಬಂಧಗಳ ಪೋಷಣೆಯ ಸ್ಪರ್ಶವೂ ಇಲ್ಲಿದೆ. ಅಣ್ಣ ತಮ್ಮಂದಿರ ಬಾಂಧವ್ಯ ತುಂಬ ಚೆನ್ನಾಗಿದೆ. ಇದು ವೀಕ್ಷಕರ ನಡುವೆ ನಂಟನ್ನು ಬೆಸೆದಿದೆ.

◆ ವಲ್ಲಭ ಪಾತ್ರ ನಿಮಗೆ ಎಷ್ಟು ಸೂಕ್ತ?

ವಲ್ಲಭ ಅಪ್ಪ–ಅಮ್ಮನ ಮುದ್ದಿನ ಮಗ. ಪೋಷಕರ ಮಾತನ್ನು ಚಾಚೂತಪ್ಪದೆ ಪಾಲಿಸುತ್ತಾನೆ. ಅವನಿಗೆ ಕೋಪ ಜಾಸ್ತಿ ಆದರೂ ತಮಾಷೆಯ ಗುಣ ಇದೆ. ತುಂಬ ಕ್ರಿಯಾಶೀಲ ವ್ಯಕ್ತಿತ್ವ. ತುಂಬ ಮಾತನಾಡುತ್ತಾನೆ. ಮಾತಿನ ವಿಷಯದಲ್ಲಿ ವೈಯಕ್ತಿಕವಾಗಿ ನನ್ನಂತೆಯೇ ಇರುವುದರಿಂದ ಆ ಪಾತ್ರ ನನಗೆ ತುಂಬ ಹೊಂದಿಕೆ ಆಗುತ್ತದೆ.

◆ ಡಾನ್ಸ್‌ನಿಂದ ನಟನೆಯ ಪ್ರವೇಶ ಮಾಡಿದ್ದು ಹೇಗೆ?

‘ಲೈಫ್ ಸೂಪರ್ ಗುರು’ ಎನ್ನುವ ರಿಯಾಲಿಟಿ ಶೋ ಮೂಲಕ ಕಿರುತೆರೆಗೆ ಪರಿಚಿತ ಆದೆ. ಅದರ ಬೆನ್ನಿಗೆ ಎರಡು ಡಾನ್ಸ್ ಶೋಗಳಲ್ಲಿ ಮಾಡಿದೆ. ಡಾನ್ಸ್ ಮತ್ತು ಈಜು ನನ್ನ ಅತ್ಯಂತ ಪ್ರೀತಿಯ ಹವ್ಯಾಸ. ಚಿಕ್ಕವಯಸ್ಸಿನಿಂದಲೂ ಅಭ್ಯಾಸ ಮಾಡಿಕೊಂಡು ಬಂದಿದ್ದೇನೆ. ಸಾರ್ವಜನಿಕ ಕಾರ್ಯಕ್ರಮಗಳಲ್ಲಿಯೂ ಡಾನ್ಸ್ ಮಾಡುತ್ತಿದ್ದೆ. ‘ಸರಯೂ’ ಧಾರಾವಾಹಿಯಿಂದ ‘ಗಟ್ಟಿಮೇಳ’ ಹೀಗೆ ಬೇರೆ ಬೇರೆ ಪಾತ್ರಗಳನ್ನು ನಿರ್ವಹಿಸಿದೆ. ‘ಲ್ಯಾಂಡ್‌ಲಾರ್ಡ್’ ಸಿನಿಮಾದಲ್ಲಿ ವಿಲನ್ ಪಾತ್ರದಲ್ಲಿ ಕಾಣಿಸಿಕೊಳ್ಳಲಿದ್ದೇನೆ. ಡಾನ್ಸ್ ನನಗೆ ಅಭಿನಯ ಜಗತ್ತಿನ ಪ್ರವೇಶಕ್ಕೆ ದಾರಿ ತೋರಿಸಿತು.

◆ ಕ್ರೀಡೆಯನ್ನು ಮುಂದುವರಿಸಬೇಕಿತ್ತು ಎಂದು ಅನ್ನಿಸಿದ್ದು ಇದೆಯಾ?

ಕ್ರೀಡಾ ಸ್ಫೂರ್ತಿ ಈಗಲೂ ಇದೆ. ಮೈಸೂರಿನಲ್ಲಿಯೇ ಹುಟ್ಟಿ ಬೆಳೆದಿದ್ದು. ಎಲ್‌ಕೆಜಿಗೆ ಹೋಗುವಾಗಲೇ ಈಜು ಕಲಿಯಲು ಆರಂಭಿಸಿದೆ. ಒಲಿಂಪಿಕ್ಸ್‌ನಲ್ಲಿ ಆಡಬೇಕು ಎಂದು ಅಪ್ಪ ದೊಡ್ಡ ಕನಸು ಕಂಡಿದ್ದರು. ಡಾನ್ಸ್–ಈಜು ಬಿಟ್ಟರೆ ಬೇರೆ ಕೆಲಸವೇ ಇರಲಿಲ್ಲ. ನಾನು ಪಿಯು ಓದುವ ಹೊತ್ತಿಗೆ ಅಪ್ಪ ತೀರಿಕೊಳ್ಳುತ್ತಾರೆ. ಆಗ ಈಜು ಕಲಿಕೆಗಿಂತ ಸಂಪಾದನೆಯ ಅನಿವಾರ್ಯ ಎದುರಾಯಿತು. ಮಾಡೆಲಿಂಗ್ ಶುರುಮಾಡಿದೆ. ನಂತರ ನೃತ್ಯವನ್ನು ತುಂಬ ಗಂಭೀರವಾಗಿ ತೆಗೆದುಕೊಂಡು ದುಡಿಯಲು ಶುರುಮಾಡಿದೆ. ಡಾನ್ಸ್ ಶೋಗಳಿಗೆ ಆಡಿಷನ್ ನೀಡಲು ಶುರುಮಾಡಿದೆ. ಅದು ಇಲ್ಲಿಗೆ ಕರೆದುಕೊಂಡು ಬಂದಿದೆ.

**ಅಭಿ ದಾಸ್**
ಕಲರ್ಸ್ ಕನ್ನಡದ ‘ನಂದಗೋಕುಲ’ ವಲ್ಲಭ

ಈಜು ಕಲಿತದ್ದು ನನಗೆ ತುಂಬ ಸಹಾಯ ಮಾಡಿದೆ. ಜೀವನದಲ್ಲಿ ಅದು ಅದ್ಭುತ ವಿದ್ಯೆ ಎಂದೇ ಹೇಳಬೇಕು. ಸಾಯಲು ಹೋಗಿದ್ದ ಮೂವರನ್ನು ಬದುಕಿಸಿದ್ದೇನೆ. ಅದು ಎಂತಹ ಮೆಡಲ್‌ಗಿಂತಲೂ ದೊಡ್ಡದು ಎಂದು ಭಾವಿಸಿದ್ದೇನೆ. ಚಿತ್ರೀಕರಣದಲ್ಲಿಯೂ ನೀರಿಗೆ ಹಾರುವ ಸನ್ನಿವೇಶವನ್ನು ಲೀಲಾಜಾಲವಾಗಿ ಮಾಡುತ್ತೇನೆ. ಅನೇಕರಿಗೆ ಡ್ಯೂಪ್ ಮಾಡಬೇಕಾಗುತ್ತದೆ. ಈಜನ್ನು ಮುಂದುವರಿಸಲಿಲ್ಲ ಎನ್ನುವ ನೋವು ಖಂಡಿತ ಇದೆ. ಭವಿಷ್ಯದಲ್ಲಿ ನನ್ನ ಮಗುವಿನ ಮೂಲಕ ಆ ಆಸೆ ಈಡೇರಿಸಿಕೊಳ್ಳಬೇಕು.

◆ ಬಣ್ಣದ ಜಗತ್ತಿನ ಅನುಭವ ಹೇಳುವುದಾದರೆ...

ಹತ್ತು–ಹನ್ನೆರಡು ವರ್ಷದ ಈ ಜೀವನದಲ್ಲಿ ತುಂಬ ಒತ್ತಡದಲ್ಲಿ ಕೆಲಸ ಮಾಡಿ ಏನಪ್ಪ ಬಿಡುವೇ ಸಿಗಲ್ಲ ಎಂದು ಅನ್ನಿಸಿದ್ದು ಇದೆ. ಅಂತೆಯೇ ಕೆಲಸವೇ ಇಲ್ಲದೆ ವರ್ಷಗಟ್ಟಲೆ ಖಾಲಿ ಕುಳಿತ ಸಂದರ್ಭಗಳೂ ಇವೆ. ಸೂಪರ್ ಸ್ಟಾರ್ ಆದರೂ ಅದು ಜಾಸ್ತಿ ದಿನ ಉಳಿಯುವುದಿಲ್ಲ. ಯಾವುದೇ ಜನಪ್ರಿಯತೆ ಕೂಡ ಅಷ್ಟೇ. ಮುಂದಿನ ತಲೆಮಾರು ಬರುತ್ತಿದ್ದಂತೆ ಹಳೆಯದು ಮರೆಯಾಗುತ್ತದೆ. ಏನೇ ಆಗಿದ್ದರೂ ಕೆಲಸ ನಿರಂತರವಾಗಿ ಇರಬೇಕು ಎಂದು ಬಯಸುತ್ತೇನೆ.

◆ ‘ಬಿಗ್ ಬಾಸ್’ ಅವಕಾಶ ಬಂದರೆ ಏನು ಹೇಳುತ್ತೀರಿ?

ನನಗೆ ಸೀಸನ್ 4ರಿಂದಲೂ ಕರೆ ಬರ್ತಾನೆ ಇದೆ. ನಾನು ಹೋಗಿಲ್ಲ. ನನಗೆ ಅದು ಇಷ್ಟ ಆಗಲ್ಲ. ನಟನಾಗಿ ಎಕ್ಸ್‌ಕ್ಲೂಸಿವ್ ಆಗಿ ಇರಬೇಕು ಎಂದು ಬಯಸುತ್ತೇನೆ. ಪ್ರೇಕ್ಷಕರಿಗೆ ನಟನಾಗಿ ಇಷ್ಟ ಆಗಿದ್ದೇನೆ ಅಂದರೆ, ಪಾತ್ರಗಳ ಮೂಲಕವೇ ಕಾಣಿಸಿಕೊಳ್ಳಬೇಕು. ಸಿನಿಮಾದಲ್ಲಿ ಸಾಕಷ್ಟು ಪಾತ್ರಗಳನ್ನು ಮಾಡಿದ್ದೇನೆ. ‘ಡಿಯರ್ ವೈಫ್’ ನಾಯಕನೂ ಆಗಿದ್ದೇನೆ. ಇನ್ನೂ ಅದು ತೆರೆಗೆ ಬಂದಿಲ್ಲ. ಬೆಳ್ಳಿತೆರೆ ಕಿರುತೆರೆ ಎರಡರಲ್ಲೂ ಕ್ರಿಯಾಶೀಲನಾಗಿ ಇರಬೇಕು ಎನ್ನುವುದು ನನ್ನ ಆಸೆ. ಸುದೀಪ್, ಅಪ್ಪು ಕಿರುತೆರೆಯಲ್ಲೂ ಇದ್ದಂತೆ. ನನ್ನ ಜೊತೆ ಕಿರುತೆರೆ ಇರಬೇಕು. ಬೆಳ್ಳಿತೆರೆಯಲ್ಲೂ ಇರಬೇಕು.

◆ ಭವಿಷ್ಯದಲ್ಲಿ ಕಥೆ ಅಥವಾ ಪಾತ್ರದ ಬಗ್ಗೆ ನಿಮ್ಮ ಕನಸು ಏನು?

ಭಯಾನಕ ಸೈಕೊ ಪಾತ್ರವನ್ನು ಮಾಡಬೇಕು. ‘ಟಗರು’ನಲ್ಲಿ ಡಾಲಿ ಮಾಡಿದ ನಮೂನೆಯ ಪಾತ್ರ ಕೂಡ ಇಷ್ಟ ಆಗುತ್ತದೆ. ‘ರಾ’ ಆಗಿ ಇರಬೇಕು, ಮಾಸ್ ಆಗಿ ಕಾಣಿಸಬೇಕು. ‘ಲ್ಯಾಂಡ್‌ಲಾರ್ಡ್’ ಸಿನಿಮಾದಲ್ಲಿ ಅಂತಹದ್ದೇ ಪಾತ್ರ ಇದೆ.

■ ರಾಘವೇಂದ್ರ ಕೆ.

